10/2/14 Pg 1 Vijay Karnataka

## ರೆಕ್ಸಿನ್ ಬ್ಯಾಗ್ ಗೋದಾಮಿಗೆ ಬೆಂಕಿ: ಸಾವಿರಾರು ರೂ. ನಷ್ಟ

■ **ವಿಕ ಸುದ್ದಿಲೋಕ** ಬೆಂಗಳೂರು

ನಗರದ ಶಿವಾಜಿನಗರದಲ್ಲಿ ರೆಕ್ಸಿನ್ ಬ್ಯಾಗ್ ಗೋದಾಮಿನಲ್ಲಿ ಭಾನುವಾರ ಸಂಜೆ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಕಾಣಿಸಿಕೊಂಡ ಪರಿಣಾಮ ಸಾವಿರಾರು ರೂ. ಮೌಲ್ಯದ ವಸ್ತುಗಳು ಸುಟ್ಟು ಭಸ್ಮವಾಗಿವೆ. ಈ ಘಟನೆ ವೇಳೆಯಲ್ಲಿ ಯಾರೂ ಇಲ್ಲದ ಕಾರಣ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ.

ಶಿವಾಜಿನಗರದ ಮೀನಾಕ್ಷಿ ದೇವಾಲಯ ಸ್ಟ್ರೀಟ್‌ನಲ್ಲಿ ಅಲಿ ಮಹಮ್ಮದ್ ಎಂಬುವರಿಗೆ ಸೇರಿದ ಗೋದಾಮಿನಲ್ಲಿ ರೆಕ್ಸಿನ್ ಬ್ಯಾಗ್‌ಗಳನ್ನು ದಾಸ್ತಾನು ಮಾಡಲಾಗಿತ್ತು. ಸಂಜೆ 5.30ರ ಸುಮಾರಿಗೆ ಗೋದಾಮಿನಲ್ಲಿ ಬೆಂಕಿ ಹೊತ್ತಿಕೊಂಡು, ಹೊಗೆ ಕಾಣಿಸಿಕೊಂಡಿದೆ. ತಕ್ಷಣ ಸ್ಥಳೀಯರು ಅಗ್ನಿಶಾಮಕ ಠಾಣೆಗೆ ಕರೆ ಮಾಡಿ ವಿಷಯ ತಿಳಿಸಿದ್ದಾರೆ.

ತಕ್ಷಣದ ಮೂರು ವಾಹನಗಳಲ್ಲಿ ಸ್ಥಳಕ್ಕೆ ಬಂದ ಅಗ್ನಿಶಾಮಕ ಸಿಬ್ಬಂದಿಯು ಬೆಂಕಿ ನಂದಿಸಿ, ಹೆಚ್ಚಿನ ಅನಾಹುತ ತಪ್ಪಿಸಿದರು. ಸುಮಾರು ಅರ್ಧ ಗಂಟೆ ಕಾಲ ಬೆಂಕಿ ನಂದಿಸುವ ಕಾರ್ಯಾಚರಣೆ ನಡೆಯಿತು. ಬೆಂಕಿ ಅನಾಹುತದಿಂದ ಅಂದಾಜು 60ರಿಂದ 70 ಸಾವಿರ ರೂ. ನಷ್ಟ ಉಂಟಾಗಿದೆ ಎಂದು ಶಿವಾಜಿನಗರ ಠಾಣೆಯ ಪೊಲೀಸರು ಹೇಳಿದ್ದಾರೆ.

Kannada Prabha Page no - 2

# ತುರ್ತು ಕಾಮಗಾರಿಗೆ 10 ದಿನಗಳ ಗಡುವು

## ಅಗರ ಕೆರೆ ಅವಶ್ಯ ಕಾಮಗಾರಿಗೆ ಸೂಚನೆ

**ಬೆಂಗಳೂರು:** ಅಗರ ಕೆರೆಯ ಅವಶ್ಯ ತುರ್ತು ಕಾಮಗಾರಿಗಳನ್ನು 10 ದಿನಗಳ ಒಳಗಾಗಿ ಪೂರ್ಣಗೊಳಿಸಬೇಕೆಂದು ಕೆರೆ ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಸಿ.ಕೆ. ಶಿವಣ್ಣ ಅವರು ಎಂಜಿನಿಯರ್‌ಗಳಿಗೆ ಸೂಚನೆ ನೀಡಿದ್ದಾರೆ.

ಫಲ ಪ್ರಭ

'ಕನ್ನಡಪ್ರಭ'ದಲ್ಲಿ ಫೆ.1ರಂದು 'ಅಗರ ಕೆರೆ ಅವ್ಯವಸ್ಥೆಯ ಆಗರ' ಎಂಬ ಶೀರ್ಷಿಕೆಯಡಿ ಪ್ರಕಟಗೊಂಡ ವರದಿಗೆ ಎಚ್ಚೆತ್ತುಕೊಂಡ ಅಧಿಕಾರಿಗಳು, ಅಗರ ಕೆರೆಗೆ ಭೇಟಿ ನೀಡಿ ಅವ್ಯವಸ್ಥೆಯ ಬಗ್ಗೆ ಪರಿಶೀಲನೆ ನಡೆಸಿದರು.

ಕೆರೆಗೆ ತಂತಿಬೇಲಿ, ಕೊಳವೆಬಾವಿ ದುರಸ್ತಿಗೊಳಿಸಿ ಗಿಡಗಳಿಗೆ ನೀರುಣಿಸುವುದು, ಸೋಲಾರ್ ದೀಪ ಅಳವಡಿಸುವುದು, ವಾಕಿಂಗ್ ಟ್ರ್ಯಾಕ್ ಸುತ್ತಮುತ್ತ ಸ್ವಚ್ಛಗೊಳಿಸುವ ಕಾರ್ಯ ಕುರಿತು ತುರ್ತು ಕ್ರಮಕೈಗೊಳ್ಳಬೇಕೆಂದು ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹೊನ್ನಯ್ಯ ಹಾಗೂ ಕಾರ್ಯಪಾಲಕ ಎಂಜಿನಿಯರ್ ನಾಗರಾಜ್ ಅವರಿಗೆ ಸೂಚಿಸಿದ್ದಾರೆ.

ಕೆರೆ ವಿಸ್ತಾರವಾಗಿದ್ದು, ರಾತ್ರಿ ಗಸ್ತು ತಿರುಗಲು ಭದ್ರತಾ ಸಿಬ್ಬಂದಿಗೆ ಟಾರ್ಚ್, ಸೈಕಲ್ ಒದಗಿಸುವುದಾಗಿ ಭರವಸೆ ನೀಡಿದ್ದಾರೆ. ಅನೈತಿಕ ಚಟುವಟಿಕೆಗಳನ್ನು ತಡೆಗಟ್ಟಲು ಈಗಿರುವ ಭದ್ರತಾ ಸಿಬ್ಬಂದಿ ಸಾಕಾಗುತ್ತಿಲ್ಲ. ಇನ್ನೂ ಹೆಚ್ಚಿನ ಸಿಬ್ಬಂದಿ ನೇಮಕ ಮಾಡಿಕೊಳ್ಳಲಾಗುವುದು. ಹಾಗೆಯೇ ರಾತ್ರಿ ಪಾಳಯಕ್ಕೆ ಇಬ್ಬರು ಪೊಲೀಸ್ ಪೇದೆಗಳನ್ನು ನಿಯೋಜಿಸುವಂತೆ ಪೊಲೀಸ್ ಇಲಾಖೆಗೆ ಪತ್ರ ಬರೆಯುವುದಾಗಿ ಎಂದು ತಿಳಿಸಿದ್ದಾರೆ.

Kannada Prabha Page no-4

## ಅನಗತ್ಯ ಫ್ಲೆಕ್ಸ್ ತೆರವುಗೊಳಿಸಿ

ಲೋಕಸಭಾ ಚುನಾವಣೆ ರಂಗೇರುತ್ತಿದ್ದಂತೆ ನಗರದಲ್ಲಿ ಫ್ಲೆಕ್ಸ್, ಬಂಟಿಂಗ್ಸ್‌ಗಳ ಹಾವಳಿ ಕೂಡ ಮಿತಿ ಮೀರುತ್ತಿದೆ. ಲಂಗುಲಗಾಮಿಲ್ಲದೆ ಪಕ್ಷಗಳ ಅಭ್ಯರ್ಥಿಗಳ ಶಿಷ್ಯಂದಿರು ತಮ್ಮ ನಾಯಕರನ್ನು ತೃಪ್ತಿಗೊಳಿಸಲು ಸಿಕ್ಕೆಡೆಗಳಲ್ಲಿ ಬ್ಯಾನರ್‌ಗಳನ್ನು ಹಾಕುತ್ತಿದ್ದಾರೆ. ತಮ್ಮ ಛಾಯಾಚಿತ್ರಗಳನ್ನು ಮುದ್ರಿಸಿಕೊಂಡು ಖಾಲಿ ಜಾಗ ಇದ್ದೆಡೆ, ವಿದ್ಯುತ್ ಕಂಬಗಳಲ್ಲಿ ಫ್ಲೆಕ್ಸ್‌ಗಳನ್ನು ನೇತು ಹಾಕಿಕೊಳ್ಳುತ್ತಿದ್ದಾರೆ. ಕೂಡು ರಸ್ತೆಗಳು, ಮರಗಳು, ಕಾಂಪೌಂಡ್ ಕಂಬಗಳು ಎಲ್ಲೆಲ್ಲೂ ಬಣ್ಣಬಣ್ಣದ ಬ್ಯಾನರ್‌ಗಳೇ ಕಾಣಿಸುತ್ತಿದೆ. ಪಾಲಿಕೆ ಆಯುಕ್ತರು ಯಾರ ಮುಲಾಜಿಗೂ ಒಳಗಾಗದೆ ನಗರದ ಸೌಂದರ್ಯವನ್ನು ಚೆನ್ನಾಗಿರಿಸಲು ಅನಗತ್ಯ ಫ್ಲೆಕ್ಸ್, ಬ್ಯಾನರ್‌ಗಳ ತೆರವಿಗೆ ಕ್ರಮ ಕೈಗೊಳ್ಳಬೇಕಿದೆ.

■ ಕೋಟೇಶ್ವರ ಸೂರ್ಯನಾರಾಯಣ ರಾವ್, ಬಸವನಗುಡಿ

ಪ್ರಜಾವಾಣಿ

ಟ್ರಾನ್ಸ್‌ಫಾರ್ಮರ್ ದುರಸ್ತಿಯಲ್ಲಿ ನಿರ್ಲಕ್ಷ್ಯ

## ಕ್ಷೇತ್ರ ಅಧಿಕಾರಿಗೆ ಕಾದಿದೆ ದಂಡ

**ಪ್ರಜಾವಾಣಿ ವಾರ್ತೆ**

ಬೆಂಗಳೂರು: ಕೆಟ್ಟುಹೋದ ಟ್ರಾನ್ಸ್‌ಫಾರ್ಮರ್‌ಗಳ ದುರಸ್ತಿಯಲ್ಲಿ ನಿರ್ಲಕ್ಷ್ಯ ತೋರಿ ರೈತರಿಗೆ ಸಮಸ್ಯೆ ಉಂಟು ಮಾಡುವ ಕ್ಷೇತ್ರ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಬೆಂಗಳೂರು ವಿದ್ಯುತ್ ಸರಬರಾಜು ಕಂಪೆನಿ (ಬೆಸ್ಕಾಂ) ನಿರ್ಧರಿಸಿದೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಕೆಇಆರ್‌ಸಿ)ದ ನಿಯಮದ ಪ್ರಕಾರ ನಿರ್ಲಕ್ಷ್ಯ ತೋರಿದ ಅಧಿಕಾರಿಯ ವೇತನದಿಂದ ದಂಡ ವಸೂಲಿ ಮಾಡಲಾಗುವುದು. ಪ್ರತಿದಿನಕ್ಕೆ ₹50 ದಂಡ ವಸೂಲಿ ಮಾಡಲಾಗುವುದು ಎಂದು ಬೆಸ್ಕಾಂ ತಿಳಿಸಿದೆ.

ಬೆಸ್ಕಾಂ ವ್ಯಾಪ್ತಿಯಲ್ಲಿ 1,88,890 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳು ಇವೆ. ನಿಯಮದ ಪ್ರಕಾರ ಕ್ಷೇತ್ರಾಧಿಕಾರಿಗಳು ಗ್ರಾಮೀಣ ಭಾಗದಲ್ಲಿ ದುರಸ್ತಿಯಲ್ಲಿರುವ ಟ್ರಾನ್ಸ್‌ಫಾರ್ಮರ್ ಅನ್ನು 72 ಗಂಟೆಗಳ ಒಳಗೆ ಬದಲಾಯಿಸಬೇಕು. ನಗರ ಪ್ರದೇಶದಲ್ಲಿ 24 ಗಂಟೆಗಳ ಒಳಗೆ ಟ್ರಾನ್ಸ್‌ಫಾರ್ಮರ್ ಬದಲಾವಣೆಗೆ ಒತ್ತು ನೀಡಬೇಕು. ಆ ಮೂಲಕ ವಿದ್ಯುತ್ ವ್ಯತ್ಯಯವನ್ನು ತಪ್ಪಿಸಬೇಕು ಎಂದು ಬೆಸ್ಕಾಂ ಹೇಳಿಕೆಯಲ್ಲಿ ತಿಳಿಸಿದೆ.

ಬೆಳಗ್ಗೆ 9.30.

Udayavani 10/2/14

■ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ: ಹೋಟೆಲ್ ಕ್ಯಾಪಿಟಲ್, ರಾಜಭವನ ರಸ್ತೆ. ಉಪನ್ಯಾಸ ಕಾರ್ಯಕ್ರಮ. ಉದ್ಘಾಟನೆ: ಇಂಧನ ಸಚಿವ ಡಿ.ಕೆ. ಶಿವಕುಮಾರ್. ಅತಿಥಿಗಳು: ಆಯೋಗದ ಅಧ್ಯಕ್ಷ ಎಂ.ಆರ್. ಶ್ರೀನಿವಾಸಮೂರ್ತಿ. ಅಧ್ಯಕ್ಷತೆ: ಇಂಧನ ಇಲಾಖೆ ಅಪರ ಮುಖ್ಯ ಕಾರ್ಯದರ್ಶಿ ಪಿ. ರವಿಕುಮಾರ್. ಬೆಳಗ್ಗೆ 9.30.